# ಶಾಸನಗಳಲ್ಲಿ ಶಿವಶರಣರು

**ಎನ್.ವಿ. ಅಸ್ಕಿ**

ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸಂಶೋಧನ ಕೇಂದ್ರ, ಹುನ್ನೂರು.

**DOI: https://doi.org/10.5281/zenodo.18007983**

## ABSTRACT:

ಶಿವಶರಣರ ಜೀವನ, ಚಿಂತನೆ ಮತ್ತು ಸಮಾಜಸೇವೆಯ ಗುರುತುಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಅವುಗಳು ಅವರು ಸಮಾಜದಲ್ಲಿಟ್ಟಿದ್ದ ಸಮಾನತೆ, ಶ್ರಮ ಮತ್ತು ನೈತಿಕ ಮೌಲ್ಯಗಳ ಅಭಿಯಾನವನ್ನು ದೃಢಪಡಿಸುತ್ತವೆ. ಶರಣರು ಜಾತಿ–ಧರ್ಮ ಭೇದಗಳನ್ನು ತೊಡೆದು ಹಾಕಿ ಎಲ್ಲರಿಗೂ ಒಂದೇ ಆದ್ಯತೆ ನೀಡಬೇಕು ಎಂದು ಬೋಧಿಸಿದರು. ಶಾಸನಗಳು ಅವರ ವಚನಪ್ರಚಾರ, ಅನಿಸಿಕೆಗಳು ಮತ್ತು ಜನಜಾಗೃತಿ ಕಾರ್ಯಗಳ ನೈಜ ದಾಖಲೆಗಳಾಗಿವೆ. ಸಮಾಜ ಪರಿವರ್ತನೆಗಾಗಿ ಅವರು ಮಾಡಿದ ಹೋರಾಟವನ್ನು ಶಾಸನಗಳು ಇತಿಹಾಸದ ಸಾಕ್ಷಿಯಾಗಿ ಉಳಿಸಿವೆ. ಶಿವಶರಣರ ಜೀವನಪರ ಪದ್ಧತಿ ಮತ್ತು ಸೇವಾಧರ್ಮದ ಮೌಲ್ಯಗಳು ಶಾಸನಗಳಲ್ಲಿ ಸ್ಪಷ್ಟವಾಗಿ ಅಭಿನಿವೇಶಗೊಂಡಿವೆ. ಲಿಂಗಾಯತ ಧಾರ್ಮಿಕ ಮತ್ತು ಸಾಮಾಜಿಕ ಚಿಂತನೆಗಳ ವಿಸ್ತರಣೆಯಲ್ಲಿ ಅವರ ಪಾತ್ರ ಮಹತ್ತರವಾಗಿತ್ತು.

## KEYWORDS:

ಶಾಸನಗಳು, ಶಿವಶರಣರು, ವಚನ ಸಾಹಿತ್ಯ, ಸಮಾನತೆ, ಮಾನವತಾವಾದ, ಸಾಮಾಜಿಕ ಪರಿವರ್ತನೆ, ಲಿಂಗಾಯತ ಚಿಂತನೆ.

**ಪ್ರಸ್ತಾವನೆ:**

ಕರ್ನಾಟಕದ ಮಧ್ಯಕಾಲೀನ ಇತಿಹಾಸದಲ್ಲಿ ಶಿವಶರಣರು ತರುತ್ತಾರೆ ಎನ್ನಲಾದ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಿವರ್ತನೆ ವಿಶೇಷ ಅಧ್ಯಯನಾರ್ಹವಾಗಿದೆ. 12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಶರಣಚಳವಳಿಯು ಕೇವಲ ಧಾರ್ಮಿಕ ಸುಧಾರಣೆಯಲ್ಲ; ಅದು ಮಾನವ ಸಮಾನತೆ, ಲಿಂಗಸಾಮ್ಯತೆ, ವರ್ಣವ್ಯವಸ್ಥೆಗೆ ಎದುರಾಳಿ ಮತ್ತು ಪರಿಶುದ್ಧ ಕಾರ್ಯಪ್ರವರ್ತನೆಗಳ ಸಮನ್ವಯ ಜಗತ್ತನ್ನು ನಿರ್ಮಿಸಬೇಕೆಂಬ ಆಶಯವನ್ನು ಉತ್ತೇಜಿಸಿತು. ಈ ಚಳವಳಿಯ ವಿಸ್ತಾರ ಮತ್ತು ಅದರ ನೆಲೆಯನ್ನು ತಿಳಿಯಲು ಶಾಸನಗಳು ಅತ್ಯಂತ ನಂಬಿಕೆಯ ಮೂಲಗಳು. ಹಳ್ಳಿಯಲ್ಲಿ, ಪಾಳ್ಯಗಳಲ್ಲಿ, ದೇವಸ್ಥಾನಗಳಲ್ಲಿ ಮತ್ತು ಮಠಗಳಲ್ಲಿ ಪತ್ತೆಯಾದ ಶಾಸನಗಳು ಶರಣರ ನಡೆ–ನುಡಿ, ಸಾಮಾಜಿಕ ಸ್ಥಾನ, ಅವರ ಸಂಘಟನೆ ಹಾಗೂ ಸಮಾಜದ ಮೇಲೆ ಬೀರಿದ ಪ್ರಭಾವಗಳ ಸಾಕ್ಷಿಗಳಾಗಿವೆ. ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಗಳ ಶಿಲಾಶಾಸನಗಳು ವಿಶೇಷವಾಗಿ ಮಹತ್ವಪೂರ್ಣ. ವಿಜಯಪುರ ಜಿಲ್ಲೆಯಲ್ಲಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರು ಮತ್ತು ನಂತರದ ಕಾಲದ ಆಡಳಿತಗಾರರು ಶರಣ ಸಂಪ್ರದಾಯಕ್ಕೆ ನೀಡಿದ ಮಾನ್ಯತೆಯನ್ನು ಪ್ರತಿಬಿಂಬಿಸುವ ಶಾಸನಗಳು ದೊರಕುತ್ತವೆ. ಬಸವಣ್ಣನವರ ಕಾಲಕ್ಕೆ ಸೇರಿದ ಹಲವಾರು ನಂಬಿಕೆಗಳು, ಚಾರಿತ್ರಿಕ ಘಟನೆಗಳು ಮತ್ತು ಶರಣರ ಸೇವಾ ಪರಂಪರೆ ಇಲ್ಲಿ ಬೆಳಕು ಚೆಲ್ಲುತ್ತವೆ. ಬೆಳಗಾವಿ ಜಿಲ್ಲೆಯ ಶಾಸನಗಳಲ್ಲಿ ಶರಣರ ಚಟುವಟಿಕೆಗಳು, ಸ್ಥಳೀಯ ಮಠಗಳ ಅಭಿವೃದ್ಧಿ, ಗ್ರಾಮೀಣ ಸಮಾಜದಲ್ಲಿ ಶರಣರ ನೈತಿಕ–ಸಾಮಾಜಿಕ ಪಾತ್ರ ಮತ್ತು ವಚನಸಾಹಿತ್ಯದ ವ್ಯಾಪ್ತಿ ಕುರಿತು ಮಾಹಿತಿಗಳು ದೊರಕುವವು.

ಈ ಎರಡು ಜಿಲ್ಲೆಗಳ ಶಾಸನಗಳನ್ನು ಹೋಲಿಕೆಗೊಳಿಸಿ ಅಧ್ಯಯನ ಮಾಡುವುದರಿಂದ ಶರಣಚಳವಳಿಯ ಭೌಗೋಳಿಕ ವ್ಯಾಪ್ತಿ, ಪ್ರಾದೇಶಿಕ ವೈಶಿಷ್ಟ್ಯ , ರಾಜಕೀಯ ಬೆಂಬಲ ಮತ್ತು ಸಾಮಾಜಿಕ ಪ್ರಭಾವವನ್ನು ಅರ್ಥಮಾಡಿಕೊಳ್ಳಬಹುದು. ಶಾಸನಗಳಲ್ಲಿ ಕಂಡುಬರುವ ಪದಪ್ರಯೋಗಗಳು, ದಿನಾಂಕಗಳು, ದಾನಧರ್ಮ, ಅನ್ನದಾಸೋಹ, ಮಠಸಂಸ್ಥೆಗಳ ಉಲ್ಲೇಖಗಳು ಹಾಗೂ ಶಿವಭಕ್ತರ ಜೀವನಪದ್ಧತಿ–ಇವೆಲ್ಲವು ಶರಣಚಿಂತನೆಯ ನೆಲೆಯನ್ನೂ ಬೆಳವಣಿಗೆಯನ್ನೂ ಅನಾವರಣಗೊಳಿಸುವ ಸಮೃದ್ಧ ಮೂಲಗಳಾಗಿವೆ. ಹೀಗಾಗಿ, ಈ ಪ್ರಬಂಧವು ಶಾಸನ ಪರಂಪರೆಯ ಆಧಾರದ ಮೇಲೆ ವಿಜಯಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಶಿವಶರಣರ ಚಟುವಟಿಕೆಗಳನ್ನು ವಿಶ್ಲೇಷಿಸಲು ಬದ್ಧವಾಗಿದೆ. ವಿಜಯಪುರ ಜಿಲ್ಲೆಯು ಶರಣರ ನಾಡೆಂದೇ ಪ್ರಚಲಿತವಾಗಿದೆ. ಬಸವಪೂರ್ವ ಯುಗದ ಬಸವೇಶ್ವರ, ಮಡಿವಾಳ ಮಾಚಿದೇವ, ಹಾವಿನಹಾಳ ಕಲ್ಲಯ್ಯ, ಚನ್ನ ಬಸವಣ್ಣ, ಸೊನ್ನಲಿಗೆಯ ಸಿದ್ಧರಾಮ ಮತ್ತು ನೆಲುವಿಗೆಯ ಕಾಂತಯ್ಯ ಮುಂತಾದ ಶರಣರ ಕಾರ್ಯಕ್ಷೇತ್ರವು ಇದಾಗಿದೆ. ಈ ಜಿಲ್ಲೆಯಲ್ಲಿ ದೊರೆತ ಶಾಸನಗಳನ್ನು ಅವಲೋಕಿಸಿ ಶರಣರ ಕುರಿತಾಗಿರುವ ವಿಷಯಗಳನ್ನು ಕ್ರೂಢೀಕರಿಸುವುದೇ ಈ ಲೇಖನದ ಉದ್ದೇಶವಾಗಿದೆ.

ಈವರೆಗೆ ಈ ಕುರಿತು ಕೆಲವು ಅಧ್ಯಯನಗಳು ನಡೆದಿವೆ ಅವುಗಳಲ್ಲಿ ಎಂ.ಎಂ. ಕಲಬುರ್ಗಿ ಅವರ ವಿಜಯಪುರ ಜಿಲ್ಲೆಯ ಶಾಸನ ಸೂಚಿ, ಶಾಸನಗಳಲ್ಲಿ ಶಿವಶರಣರು, ಕೊಂಡಗೂಳಿ ಕೇಶರಾಜನ ಕೃತಿಗಳು, ಕೆ.ಜಿ. ಕುಂದಣಗಾರ ಅವರ ಅಧ್ಯಯನಗಳು, ಎಸ್.ಕೆ. ಕೊಪ್ಪ ಅವರ ತರ್ದವಾಡಿ ನಾಡಿನ ಶಾಸನಗಳು ಒಂದು ಸಾಂಸ್ಕೃತಿಕ ಅಧ್ಯಯನ ಇವುಗಳ ಜೊತೆಗೆ ಎಸ್.ಎಂ. ವೃಷಬೇಂದ್ರ ಸ್ವಾಮಿಯವರು, ಬಿ. ಎಸ್. ಗದ್ದಿಗಿಮಠ ಅವರು ಫ.ಗು. ಹಳಕಟ್ಟಿಯವರು ಮುಂತಾದವರು ಶರಣರ ಕುರಿತಾಗಿ ಉಪಯುಕ್ತ ಲೇಖನಗಳ ಮೂಲಕ ಮಾಹಿತಿಯನ್ನು ಒದಗಿಸಿದ್ದಾರೆ ಈ ಬಿಡಿ ಲೇಖನಗಳು ಬೇರೆ ಬೇರೆ ಗ್ರಂಥಗಳಲ್ಲಿ ಪ್ರಕಟವಾಗಿವೆ.

ಈ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ತಾಳಿಕೋಟಿ ಗ್ರಾಮದಲ್ಲಿ ದೊರೆತಿರುವ ಕಲ್ಯಾಣದ ಚಾಲುಕ್ಯ ನಾಲ್ಕನೆಯ ಸೋಮೇಶ್ವರನ ಕ್ರಿ.ಶ. ೧೧೮೪ ರ ಶಾಸನವೊಂದರಲ್ಲಿ ಉಲ್ಲೇಖವಾಗಿರುವ" ಪುರಾತನ ನೂತನರೆನಿಸಿದ ಅಸಂಖ್ಯಾತ ಗಣಂಗಳ ನಾಮಾದಿ ಪ್ರಶಸ್ತಿಸಹಿತಂ" ಎಂಬ ಮಾತು ಪುರಾತನರು, ನೂತನರು, ಮತ್ತು ಅಸಂಖ್ಯಾತ ಗಣಂ ಗಳು ಎಂಬ ಪದಗಳನ್ನು ಅವಲೋಕಿಸಿದರೆ ಕನ್ನಡ ನಾಡಿನ ಬಸವಾದಿ ಶರಣರನ್ನು ನೂತನರೆಂದು, ತಮಿಳುನಾಡಿನ ಶೈವರನ್ನು ಪುರಾತನರೆಂದು ಕರೆಯುವ ರೂಢಿ ಇದೆ. ಇದನ್ನು ಈ ಶಾಸನದಲ್ಲಿ ಪುರಾತನ ನೂತನರೆನಿಸಿದ ಅಸಂಖ್ಯಾತ ಗಣಂಗಳು ಎಂದು ಉಲ್ಲೇಖಿಸಲಾಗಿದೆ. ಸಿಂಧಗಿ ತಾಲೂಕಿನ ಹಿಪ್ಪರಗಿ ಗ್ರಾಮದ ಕಾಸಿಲಿಂಗ ದೇವಾಲಯದಲ್ಲಿ ರುವ , ಕ್ರಿ.ಶ.1192 ರ ಶಾಸನದಲ್ಲಿ "ಶಿವಧರ್ಮವೋರ್ಜಿತಮೆನಲು ಕುಡಲಿಂಗುಣ ವೈರನರ್ತಿಯಿಂ ಮುನ್ನೆ ಪುರಾತನ ಭಕ್ತರುವರಂ ಬಡೆದೀಸ್ಥಳವೆಂದು" ಎಂಬ ಉಲ್ಲೇಖದಲ್ಲಿಯ ಪುರಾತನ ಭಕ್ತರು ಎಂಬ ಉಲ್ಲೇಖವು ಅದನ್ನೇ ಧ್ವನಿಸುತ್ತದೆ.

'ಗಣ ಸಹಸ್ರನಾಮಾವಳಿ' ಎಂಬ ಗ್ರಂಥದಲ್ಲಿ ಶಿವೋಪಾಸಕರನ್ನು ಎಂಟು ವರ್ಗಗಳಲ್ಲಿ ವಿಭಾಗಿಸಿದೆ ಮತ್ತು ಶೈವ–ವೀರಶೈವವಾಗಿ ಬೆಳೆದು ಬಂದ ಕಾಲಕ್ರಮವನ್ನು ತಿಳಿಸಿಕೊಡುತ್ತದೆ. ಅವುಗಳೆಂದರೆ,

ಪ್ರಮಥಗಣ, 2. ರುದ್ರಗಣಗಳು ಕೈಲಾಸದ ಶಿವಗಣಂಗಳು ಅಮರ್ತ್ಯರಾದ ಇವರ ವಿವೇಚನೆಗೆ ಇತಿಹಾಸದಲ್ಲಿ ಸ್ಥಾನವಿಲ್ಲ. 3. ಯೋಗಾಚಾರ್ಯರು – ನಕುಲೀಶಪಾಶುಪತರು,

ಕ್ರಿಸ್ತಶಕದ ಆದಿಯಲ್ಲಿ ಗುಜರಾತದ ಕಾಯಾರೋಹಣದಲ್ಲಿ ಅವತಾರವೆತ್ತಿದ ನಕುಲೀಶನಿಂದ ರೂಪಗೊಂಡ ಈ ನಕುಲೀಶ ಪಾಶುಪತವು ಬಹುಕಾಲದ ಹಿಂದೆ ಕರ್ನಾಟಕವನ್ನು ಪ್ರವೇಶಿಸಿದೆ. ಇದರೊಂದಿಗೆ ಬೆಳೆದು ಬಂದ ಕಾಳಾಮುಖ, ಕಾಪಾಲಿಕ, ಕಾಲ, ಮಹಾವ್ರತಗಳು ಧರ್ಮದ ಪರಮ ಕರ್ತವ್ಯಗಳು ಈ ಶೈವರ ಹೆಸರಿನಲ್ಲಿ ಸಾವಿರಾರು ಶಾಸನಗಳು ಸೃಷ್ಟಿಯಾದವು. 4. ತ್ರಿಷಷ್ಠಿ ಪುರಾತನರು ಇವರು ತಮಿಳುನಾಡಿನ 63 ಪುರಾತನರು ಇವರನ್ನು ಕುರಿತು ಅನೇಕ ಶಾಸನಗಳು ಹುಟ್ಟಿದವು. ಈ ಯೋಗಾಚಾರ್ಯ ಮತ್ತು ತ್ರಿಷಷ್ಠಿ ಪುರಾತನ ಎಂಬ ಶೈವಮತಗಳ ಮುಂದಣ ದೊಡ್ಡ ಹೆಜ್ಜೆ ವೀರಶೈವ. ಈ ಶೈವಗಳು ವೀರಶೈವವಾಗುವಲ್ಲಿ ಮಧ್ಯ ಸಮ್ಮಿಶ್ರಣ ರೂಪದ ಶೈವಧರ್ಮವೊಂದು ರೂಪುಗೊಂಡಿರುವ ಈ ಮಧ್ಯದ ಅವಧಿಯಲ್ಲಿ ಗಣಸಹಸ್ರ ನಾಮಾವಳಿಯ ಮುಂದಣ ವರ್ಗಗಳಾದ 5. ಷೋಡಶರು 6. ತೇರಸರು 7. ದಶಗಣರು ಅಲ್ಲದೆ ಕೊಂಡಗೂಳಿ ಕೇಶಿರಾಜ, ರೇವಣಸಿದ್ಧ, ಜೇಡರ ದಾಸಿಮಯ್ಯ ಮೊದಲಾದ ಮಹಿಮರು ಸಮಾವೇಶಗೊಳ್ಳುತ್ತಾರೆ.

ಪರಾವಲಂಬನೆಯಲ್ಲಿ ಉಪೇಕ್ಷೆ ಎಂಬ ವೀರಶೈವ ತತ್ವಗಳು ಬೆಳೆದಂತೆ ಶಾಸನಗಳ ಬರವಣಿಗೆ ತಾನಾಗಿಯೇ ಇಳಿದು ಹೋಯಿತು. ಶರಣರು ಶಾಸನಗಳನ್ನು ಬರೆಸಲಿಲ್ಲ. ಆದರೂ ಅಲ್ಲೊಂದು ಇಲ್ಲೊಂದು ಶಾಸನಗಳನ್ನು ಕೆಲವರು ಬರೆಸಿದರು. ಬಸವಾದಿ ಪ್ರಮಥರನ್ನು ಕುರಿತು ಮುಂದಿನ ವೀರಶೈವರು ಕೆಲವನ್ನು ಬರೆಯಿಸಿದರು. ಈ ಶರಣ ಸಂತಾನಕ್ಕೆ ಹಲವು ನೂರು ವರ್ಷಗಳ ಇತಿಹಾಸವಿದೆ. ಅಂದರೆ ತಮ್ಮ ಹಿಂದೆ ಇದ್ದ ದೇವರ ದಾಸಿಮಯ್ಯಾದಿಗಳ ವೀರಶೈವವನ್ನು ಪರಿಷ್ಕರಿಸಿ ೧೨ನೆಯ ಶತಮಾನದಲ್ಲಿ ಅದಕ್ಕೆ ಶಾಶ್ವತ ಮುದ್ರೆಯನ್ನು ಮೊದಲು ಹಾಕಿದವರು ಬಸವಾದಿ ಶರಣರು. ತರುವಾಯಿ ೧೫ನೆಯ ಶತಮಾನದ ನೂರೊಂದು ವಿರಕ್ತರಿಂದ ೧೬ನೆಯ ಶತಮಾನದ ಏಳನೂರೊಂದು ವಿರಕ್ತರಿಂದ ಪೋಷಣೆಗೊಳ್ಳುತ್ತ ಅದು ಇಂದಿನವರೆಗೆ ಉತ್ತರೋತ್ತರ ನಡೆದು ಬಂದಿದೆ. ಈ ಕ್ರಿ.ಶ.೧೧೦೭ ರ ಶಾಸನದ ಪ್ರಕಾರ ಕೇಶಿರಾಜನ ತಂದೆ ನಿಂಬಣಯ್ಯ ಕಲ್ಯಾಣದ ಚಾಲುಕ್ಯರಲ್ಲಿ ದಂಡನಾಯಕನಾಗಿದ್ದುದನ್ನು ಶಾಸನ "... .......ವಾಜಿಕುಳಾಂ ಬರದ್ಯುಮಣಿ ಬನ್ದು ಜನ ಚಿನ್ತಾ (ಮ)ಣಿ ಶ್ರೀ ಮತ್ತ್ರಿ ಭುವನಮಲ್ಲ ದೇವ ಪಾದಾರಾಧಕಂ ಪ .. ಕನಾಮಾದಿ ಸಮಸ್ತ ಪ್ರಶಸ್ತಿ ಸಹಿತ –– ಮನಮಹಾಪ್ರಧಾನಂ ಮನೆವೆರ್ಗ್ಗಡೆ ದಂಡ .... ಬಣಯ್ಯಂಗಳ್ ನಿಂಬಣ ದಂಡನಾಥನನ್ನು 'ವಾಜಿಕುಳಾಂಬರದ್ಯುಮಣಿ' ಎಂದು ಕರೆದ ಈ ಶಾಸನ ಮಗ ಕೇಶಿರಾಜನನ್ನು ಕುರಿತು –

"..........ಕೊಣ್ಡಂಗುಳಿಯಲು ನಿಂಬ......... ಗಳ ಮಗ ಸ್ವಸ್ತಿ ಸಮಧಿಗತಪಞ್ಚ ಮಹಾಶಬ್ದ ಮಹಾಸಾಮನ್ತಾಧಿಪತಿ (ಮ) ಮಹಾಪ್ರಚಣ್ಡ ದಂಡನಾಯಕ ದುಷ್ಟ ವಿದ್ವಿಷ್ ವಿಧೇಯಕ ವಾಜಿಕುಳಾರ್ಣ್ಣವ ಪಾರಿಜಾತ ಸುಕವಿ. ಶುಕಚೂತ ಬನ್ನು ವನ ವಸನ್ತ ವಚ ಶ್ರೀ ವಧೂಕಾನ್ತ ಸಾಹಿತ್ಯಸರೋರುಹ ಮಧುಬ್ರತ ಸತ್ಯಸತ್ಯವ್ರತ ಹರಚರಣ ರಜೋರಂಜಿತೋತ್ತಮಾಂಗನ ಯ್ಯನಸಿಂಗ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀ ಮನ್ಮಹಾಪ್ರ ಧಾನಂ ಹೇರಿಲಾಳ ಸನ್ಧಿ ವಿಗ್ರಹಿ ದಣ್ಡನಾ (ಯ) ಕಂ ಕೇಸಿರಾ ಜರಸರು "

ಶಾಸನವು ಪ್ರಾರಂಭದಲ್ಲಿ ಓಂ ನಮಃ ಶಿವಾಯ ಎಂದೇ ಪ್ರಾರಂಭವಾಗುತ್ತದೆ. ಇದರಲ್ಲಿ ಉಲ್ಲೇಖವಾಗಿರುವ ಕೇಶಿರಾಜನನ್ನು 'ವಾಜಿಕುಳಾರ್ಣ್ಣವ ಪಾರಿಜಾತ' ಎಂದು ಕರೆದಿರುವುದರಿಂದ ಇವರದು ವಾಜಿ ಕುಲವೆಂಬುದು ಸ್ಪಷ್ಟವಾಗುತ್ತದೆ. ಈ ಶಾಸನದಲ್ಲಿ ಬರುವ 'ವಚನ ಶ್ರೀ ವಧು ಕಾನ್ತ ಸಾಹಿತ್ಯ ಸರೋರುಹ ಮಧು ವ್ರತ' ಎಂಬ ವಿಶೇಷಣವನ್ನು ನೋಡಿದಾಗ ಕೇಶಿರಾಜನು ಕವಿಯಾಗಿ, ಸಾಹಿತ್ಯ ಪ್ರಿಯನು ಆಗಿದ್ದನೆಂಬುದು ಸ್ಪಷ್ಟವಾಗುತ್ತದೆ.

ಹರಿಹರನು ತನ್ನ ಕೇಶರಾಜ ದಂಡನಾಯಕನ ರಗಳೆ ಎಂಬುದರಲ್ಲಿ ಕೇಶಿರಾಜನ ಸಾಹಿತ್ಯ ಚಟುವಟಿಕೆಗಳನ್ನು ಹೇಳಿದ್ದಾನೆ

ಕೇಶಿರಾಜನ ಐದು ಕೃತಿಗಳು ಮಾತ್ರ ಸಿಕ್ಕಿವೆ ಬಿಡಿಬಿಡಿಯಾಗಿ ಪ್ರಕಟಗೊಂಡ ಕೃತಿಗಳನ್ನು ಕಲಬುರ್ಗಿಯವರು ಒಂದೆಡೆ ಸಂಗ್ರಹಿಸಿ ಕೊಂಡಗೂಳಿ ಕೇಶಿರಾಜನ ಕೃತಿಗಳು ಎಂದು ಸಂಪಾದಿಸಿದ್ದಾರೆ ಅವುಗಳೆಂದರೆ, ಮಂತ್ರ ಮಹತ್ವದ ಕಂದ, ಲಿಂಗ ಸ್ತೋತ್ರದ ಕಂದ, ಭಾಗ ಒಂದು ಮತ್ತು ಎರಡು, ಶೀಲ ಮಹತ್ವದ ಕಂದ, ಮತ್ತು ನವರತ್ನಮಾಲಾ. ಪ್ರಸ್ತುತ ಕೃತಿಗಳನ್ನು ವೀರಶೈವರ ತತ್ವದ ಹಿನ್ನೆಲೆಯಲ್ಲಿ ಗಮನಿಸಿದರೆ ಮಂತ್ರ ಮಹತ್ವದ ಕಂದ ಲಿಂಗ ಮಹತ್ವದ ಕಂದ ೧ ಮತ್ತು ೨, ಅಷ್ಟಾವರಣ ವರ್ಗಕ್ಕೆ ಸಂಬಂಧಿಸಿದ ಮಂತ್ರ ಮತ್ತು ಲಿಂಗಗಳನ್ನು ಕುರಿತು ಬರೆದುದಾಗಿದೆಯೆಂಬುದು ಸ್ಪಷ್ಟ. 'ಶೀಲ ಮಹತ್ವದ ಕಂದ' ಮಾತ್ರ ವೀರಶೈವದ ಆಚಾರಗಳನ್ನು ನಿರೂಪಿಸುತ್ತಿದ್ದು, ಆ ಕಾಲದ ವೀರಶೈವದ ಚಿತ್ರವೊಂದನ್ನು ಇದರಲ್ಲಿ ಕಾಣಬಹುದಾಗಿದೆ. ಅದರಲ್ಲಿ ಯೂ ಗುರುಲಿಂಗ ಜಂಗಮ (ತ್ರಿವಿಧ), ಕಾಯಕ, ಭವಿ, ಭಕ್ತ, ಮಹೇಶ, ಚಿರ, ಜಂಗಮ, ವೀರಶೈವ, ಲಿಂಗಾಯತವಂತ ಸಮಯಾಚಾರ, ಪ್ರಸಾದ, ಆಯತ, ಸ್ವಾಯತ, ದಶವಿಧ ಪಾದೋದಕ, ಏಕಾದಶ ಪ್ರಸಾದ, ಉಪಾಧಿ, ನಿರುಪಾಧಿ ಇತ್ಯಾದಿ ಪರಿಭಾಷೆಗಳನ್ನು ವ್ಯಾಖ್ಯೆಯುಕ್ತವಾಗಿ ಬಳಸಿದುದನ್ನು ಇಲ್ಲಿ ಗಮನಿಸಬಹುದಾಗಿದೆ.

ಕ್ರಿ.ಶ.೧೧೦೭ ರ ಶಾಸನದಲ್ಲಿ ಕೇಶಿರಾಜನನ್ನು 'ಸತ್ಯ ಸತ್ಯ ವ್ರತ ಹರಚರಣ ರಜೋರಂಜಿತೋತ್ತಮಾಂಗ' ಎಂದು ಕೊಂಡಾಡಿರುವುದನ್ನು ಗಮನಿಸಿದರೆ ಕೇಶಿರಾಜನ ಶಿವೋಪಾಸನೆಗೆ ನಿದರ್ಶನಗಳಾಗಿದ್ದರೆ ಕುಕವಿ ಸುಕ ಬಂಧವನ ವಸಂತ ವಚ ಶ್ರೀ ವಧೂಕಾಂತ, ಸಾಹಿತ್ಯ ಸರೋರುಹ ಮಧುವ್ರತ ಎಂಬ ವಾಕ್ಯಗಳು ಮತ್ತು ಮೇಲೆ ಉಲ್ಲೇಖಿಸಿರುವ ಸಾಹಿತ್ಯ ಕೃತಿಗಳು ಈತನ ಕವಿ ಮನೋಧರ್ಮಕ್ಕೆ ಸಾಕ್ಷಿಯಾಗಿದೆ.

ಈ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳಲ್ಲಿ ಅತಿ ಪ್ರಮುಖವಾದದ್ದು ಕ್ರಿ.ಶ. 1184 ಏಪ್ರಿಲ್ 25 ರ ತಾಳಿಕೋಟಿಯ ಶಾಸನ ಕಲ್ಯಾಣದ ಚಾಲುಕ್ಯ ನಾಲ್ಕನೆಯ ಸೋಮೇಶ್ವರನ ಕಾಲಕ್ಕೆ ಸೇರಿದ ಈ ಶಾಸನವು ಮಹಾಮಂಡಳೇಶ್ವರ ವಿರೂಪರಸನು ಬಸವೇಶ್ವರ ದೇವಾಲಯದ ಗಣಂಗಳಿಗಾಗಿ ವೀರದಾಸನಿಗೆ ಗಣಮತವೆಂದು ನೀಡಿದ ಭೂ ದಾನದ ವಿವರವಿದೆ. ಪರಿಯಳಿಗೆ, ಅನಲೇವಾಡ, ಉಣಕಲ್ಲು, ಸಂಪಗಾವಿ, ಅಬ್ಬಲೂರು, ಮಾರುಡಿಗೆ, ಆಡಂಪುರು, ಕರಹಾಡ, ಕೆಂಭಾವಿ ಮತ್ತು ಬೊಮ್ಮಕೂರು ಗ್ರಾಮಗಳಲ್ಲಿ ಪರ ಸಮಯವನ್ನು ಧ್ವಂಸಗೊಳಿಸಿ ಶಿವ ಸಮಯವನ್ನು ಉಜ್ವರಗೊಳಿಸಿದ ಶಿವ ಶರಣರನ್ನು ಉಲ್ಲೇಖಿಸುತ್ತದೆ. ಅಲ್ಲದೆ ಶಿವಲಿಂಗ ಸಿಂಹಾಸನವನ್ನು ಸ್ಥಾಪಿಸುವುದರ ಮೂಲಕ ಸ್ಥಾವರ ಲಿಂಗ ಪೂಜೆಯನ್ನು ಮನ್ನಿಸಿರುವುದನ್ನು ಗಮನಿಸಬಹುದಾಗಿದೆ. ಮೇಲಿನ 10 ಗ್ರಾಮಗಳಲ್ಲಿ ಇದ್ದ ಶಿವಶರಣರೆಂದರೆ ಅಣಂಪುರದ ಗುಡ್ಡವೆ, ಮಾರುಡಿಗೆಯ ನಾಚಯ್ಯ, ಪರಿಯಳಿಗೆಯ ವೈಜಕವ್ವೆ, ಕೆಂಭಾವಿಯ ಬೊಗಣ್ಣ, ಅಬ್ಬಲೂರಿನ ಏಕಾಂತರಾಮಯ್ಯ, ಇನ್ನುಳಿದ 5 ಗ್ರಾಮಗಳಾದ ಅನಲೇವಾಡ, ಉಣಕಲ್ಲು, ಸಂಪಗಾವಿ, ಕರಹಾಡ ಮತ್ತು ಬೊಮ್ಮಕೂರುಗಳಲ್ಲಿ ಇದ್ದ ಶರಣರ ಬಗ್ಗೆ ತಿಳಿದು ಬರುವುದಿಲ್ಲ ಇವರಲ್ಲಿ ಕೆಲವರು ಬಸವನಿಗೆ ಸಮಕಾಲೀನರು ಇನ್ನು ಕೆಲವರು ಬಸವ ಪೂರ್ವ ಯುಗದವರು. ಮೇಲಿನ ಹತ್ತು ಗ್ರಾಮಗಳಲ್ಲಿ ಇದ್ದ ಶಿವಶರಣರಲ್ಲಿ ಅಣಂಪುರದ ಗುಡ್ಡವ್ವೆ ಒಬ್ಬಳು. ಇವಳನ್ನು ಕುರಿತು ವಿಜಯಪುರದ ಶಾಸನವೊಂದರಲ್ಲಿ ಗುಡ್ಡವೆಯ ಮೂರ್ತಿ ಪೂಜೆಯನ್ನು ಹಾಗೂ ಅದರ ಅರ್ಚಕನಿಗಿರಬೇಕಾದ ಅರ್ಹತೆಗಳ ಕುರಿತಾಗಿ ಹೇಳಿದೆ. ಅಲ್ಲಿಯೇ ಇರುವ ಕ್ರಿ.ಶ. 1278 ರ ಶಾಸನವೊಂದರಲ್ಲಿ ದೇವರುಗಳ ಅಂಗಭೋಗ ರಂಗಭೋಗಕ್ಕೆ ಶ್ರೀ ಮಂಡಳಿಕ ಮಹಾದೇವನ ರಾಣಿಯರು ದತ್ತಿಬಿಟ್ಟ ವಿವರ ಇದೆ.

ತಾಳಿಕೋಟಿಯ ಶಾಸನದಲ್ಲಿ ಉಲ್ಲೇಖವಾಗಿರುವ ಮಾರುಡಿಗೆ ಎಂಬುವುದು ಮಾರುಡಿಗೆಯ ನಾಚಯ್ಯನನ್ನು ಉಲ್ಲೇಖಿಸುತ್ತದೆ.

ವೀರಶೈವ ಪುರಾಣಗಳ ಪ್ರಕಾರ ಷೋಡಶ ಮತ್ತು ತೇರಸಗಣದ ಮಧ್ಯ ಕಾಲದಲ್ಲಿ ಬದುಕಿದ ಶರಣನೀತ ಶಿವ ಭಕ್ತರನ್ನು ಹಿಂಸಿಸಿದ ಜೈನರನ್ನು ತೇರಸರ ಬೆಂಬಲದಿಂದ ಕೊಂದು ಹಾಕಿದ ಇವನ ಶೌರ್ಯವನ್ನು ಶಾಸನವು ವೀರವತ್ತಾಗಿ ನೀಡುತ್ತದೆ. 'ಪರಿಯಳಿಗೆ ಅಣಿಲೆವಾಡ ಉಣಕಲ್ಲು ಸಂಪಗಾವಿ ಅಬ್ಬಲೂರು ಮಾರುಡಿಗೆ ಅಣಂಪೂರ ಕರಹಾಡ" ಎಂದು ಅವರ ಗ್ರಾಮಗಳ ಮೂಲಕ ಹೆಸರಿಸುವಾಗ ಪರಿಯಳಿಗೆಯ ವೈಜಕವ್ವೆಯನ್ನು ಹೆಸರಿಸಿದೆ. ಜಿನಭಕ್ತನಾದ ಗಂಡನು ಶಿವಭಕ್ತಳಾದ ಇವಳಿಗೆ ತೊಂದರೆ ಕೊಟ್ಟ ಕಾರಣ ಎಷ್ಟು ಪ್ರಯತ್ನಿಸಿದರೂ ತೆರೆಯದಿದ್ದ ಊರ ಬಸದಿಯ ಬಾಗಿಲು ಇವಳ ಹಸ್ತಸ್ಪರ್ಶದಿಂದ ತೆರೆಯಿತು. ಆಗ ಜಿನಬಿಂಬ ಒಡೆದು ಉದ್ಭವಿಸಿದ ಶಿವಲಿಂಗದಲ್ಲಿ ಈಕೆ ಐಕ್ಯವಾದಳು ಎಂದು ಪುರಾಣದ ಕಥೆ.

ಬಸವಣ್ಣನವರನ್ನು ಉಲ್ಲೇಖಿಸುವ ಶಾಸನವೊಂದು ಈ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಗುಡಿಹಾಳ ಕುಂಟೋಜಿ ಗ್ರಾಮದ ಸೀಮೆಯಲ್ಲಿದೆ. ಇದರ ಕಾಲ ಸುಮಾರು ಹದಿನಾಲ್ಕನೆಯ ಶತಮಾನ. ಇಲ್ಲಿ ಕಲ್ಲು ನಿಲ್ಲಿಸಿದ ಹೊಲ ಬಸವಣ್ಣನವರ ಹೆಸರಿನಲ್ಲಿ ಬಿಟ್ಟು ಮಾನ್ಯವಾಗಿರಬಹುದು. ಇಲ್ಲವೇ ಬಾಗೇವಾಡಿಯ ಸುತ್ತಣ ಪ್ರದೇಶಕ್ಕೆ 'ಬಸವರಾಜ ದೇವರ ಮಾನ್ಯ' ಎಂದು ಕರೆಯುತ್ತಿರಬಹುದು ಬಸವಣ್ಣನವರಿಗೆ ಜನ್ಮ ನೀಡಿದ ಬಾಗೇವಾಡಿಯ ಪುಣ್ಯ ಪ್ರದೇಶದಲ್ಲಿ ಅವರನ್ನು ಸ್ಮರಿಸುವ ಏಕೈಕ ಶಾಸನವಾಗಿದೆ.

ಈ ಜಿಲ್ಲೆಯ ಇಂಡಿ ತಾಲೂಕಿನ ಭೂಯಾರ ಗ್ರಾಮದ ಕ್ರಿ.ಶ. 1162 ರ ಶಾಸನವೊಂದರಲ್ಲಿ ಪ್ರಾರಂಭದಲ್ಲಿ "ನೆಲುವಿಗೆಯ ಸಾತ್ಕಯ್ಯಗಳ ಶ್ರೀಪಾದಗಳೇ ಶರಣು ಓಂ ನಮಃ ಶಿವಾಯ" ಎಂದೇ ಪ್ರಾರಂಭವಾಗುತ್ತದೆ. ಈ ಅವಧಿಯಲ್ಲಿ ಅರಸ ಕಲಚೂರಿ ಬಿಜ್ಜಳ. ಈತನ ಮಾಂಡಲಿಕನಾಗಿ ತರ್ದವಾಡಿ ನಾಡಿನ ಒಂದು ವಿಭಾಗವಾದ 37 ಬಾಡಗಳನ್ನಾಳುವ ಲಕ್ಷ್ಮಿದೇವ ದಂಡನಾಯಕನು ನೆಲುವಿಗೆಯ ಶಿವಯೋಗಿ ಸಾತಯ್ಯನ ಭೃತ್ಯ ಬಸವಯ್ಯ ಎಂಬುವರಿಗೆ ದತ್ತಿ ನೀಡುವುದು ಈ ಶಾಸನದ ವಿಷಯವಾಗಿದೆ ಇಲ್ಲಿ ದತ್ತಿ ಪಡೆದವನು ಸಾತಯ್ಯನಲ್ಲ ಅವನ ಶಿಷ್ಯ ಬಸವಯ್ಯ.

ಸಾತಯ್ಯನು ಒಂದು ವೇಳೆ ಕ್ರಿ.ಶ. 1262ರ ಬಸವಯ್ಯನಿಗೆ ಪರಂಪರೆಯ ಗುರುವಾಗಿದ್ದರೆ ಆತನು ಬಸವಣ್ಣನವರಿಗೆ ತೀರ ಪ್ರಾಚೀನವಾಗುತ್ತಾನೆ. ದೀಕ್ಷಾ ಗುರುವಾಗಿದ್ದರೆ ಹಿರಿಯ ಸಮಕಾಲೀನನಾಗುತ್ತಾನೆ. ದತ್ತಿ ಪಡೆಯುವಾಗ ಗುರು ಸಾತಯ್ಯ ಬದುಕಿದ್ದನೋ ಇಲ್ಲವೋ ಸ್ಪಷ್ಟವಾಗುವುದಿಲ್ಲ. ಸಿಂಧಗಿ ತಾಲೂಕಿನ ಕಡಲೆವಾಡ ಗ್ರಾಮದ ಶಿವಲಿಂಗ ದೇವಾಲಯದಲ್ಲಿ ರುವ ಕ್ರಿ. ಶ. 1192 ರ ಯಾದವ ಜೈತುಗಿಯ ಶಾಸನವೊಂದರಲ್ಲಿ 'ನಿಜಸಮಯ ಶರಣ್ಯೈಕ ರಕ್ಷದ ಕ್ಷನನವರ ತುಸು ಭೀಕ್ಷಿತ ಪಂಡಿತಚೂಡಾಮಣಿಗಳುಂ ಶಿಷ್ಟಾಜನ ಚಿಂತಾಮಣಿಗಳಪ್ಪ ಕಡಲೆವಾಡದ ಶ್ರೀಸ್ವಯಂಭು ಸೋಮನಾಥದೇವರ ಹಿರಿಯ ಮಠದಾಚಾರ್ಯ ಸಾತಿಮಯ್ಯಂಗಳ ಕಾಲಂ ಕರ್ಚ್ಚಿ ಧಾರಾಪೂರ್ವಕಂ ಮಾಡಿ ಕೊಟ್ಟೂರು ಎಂಬುವುದು ಅಲ್ಲಿಯ ಹಿರಿಯ ಮಠದ ಆಚಾರ್ಯ ಸಾತಿಮಯ್ಯಗಳು ಬಹುಶಃ ಭೂಯಾರದ ಶಾಸನದಲ್ಲಿ ಉಲ್ಲೇಖವಾಗಿರುವ ಸಾತಿಮಯ್ಯಗಳೇ ಆಗಿರಬೇಕು. ಇಂಡಿ ತಾಲೂಕಿನ ಹಿರೇಬೇವಿನೂರು ಶಾಸನದಲ್ಲಿ ರೇವಣಸಿದ್ಧನ ಉಲ್ಲೇಖವಿದೆ. ರೇವಣಸಿದ್ಧ ಮತ್ತು ವೀರಶೈವ ಪಂಚಾಚಾರರಲ್ಲೊಬ್ಬನಾದ ರೇವಣಸಿದ್ದರು ಭಿನ್ನರೋ ಅಭಿನ್ನರೋ ಎಂಬ

ಪ್ರಶ್ನೆಯು ಇದೆ . ಈ ಕುರಿತು ಹೆಚ್ಚಿನ ಅಧ್ಯಯನದ ಅವಶ್ಯಕತೆ ಇದೆ.

ಬಸವನ ಬಾಗೇವಾಡಿ ತಾಲೂಕಿನ ಮಸೂತಿ ಗ್ರಾಮದಲ್ಲಿ ರುವ ಕ್ರಿ.ಶ.೧೧೫೭ ರ ಕಲ್ಯಾಣದ ಚಾಲುಕ್ಯ ಮೂರನೆಯ ತೈಲಪ ಶಾಸನದಲ್ಲಿ ರೇವಣೇಶ್ವರ ದೇವಾಲಯಕ್ಕೆ ಗ್ರಾಮದ ದಾಸಿಮಯ್ಯನ ಮಗಳಾದ ಕಾಳಿಯವ್ವೆಯು ದಾನ ನೀಡಿರುವುದನ್ನು ಹೇಳಿದೆ. ಈ ಜಿಲ್ಲೆಯ ಇಂಗಳೇಶ್ವರ ಗ್ರಾಮದಲ್ಲಿ ರೇವಣಸಿದ್ಧನ ಗವಿಯೆಂದು ಒಂದು ಗವಿಯನ್ನು ತೋರಿಸುತ್ತಾರೆ. ಕಲ್ಯಾಣ ವೀರಶೈವ ಆಂದೋಲನಕ್ಕೆ ಬಸವಣ್ಣನವರು ಕೇಂದ್ರಶಕ್ತಿ ಎನಿಸಿದಂತೆ ಅದೇ ಕಾಲದ ಸೊನ್ನಲಿಗೆಯ ಶೈವ ಆಂದೋಲನಕ್ಕೆ ಕೇಂದ್ರ ಶಕ್ತಿ ಎನಿಸಿದವನು ಸಿದ್ಧರಾಮ ಶಿವಯೋಗಿ. ವೀರಶೈವಕ್ಕೆ ಕಡಿಮೆ ಇಲ್ಲದ ರೀತಿಯಲ್ಲಿ ಶೈವವನ್ನು ಬೆಳಗಿಸಲು ನಿರತನಾಗಿದ್ದ ಈತನು ವೀರಶೈವ ದೀಕ್ಷೆಯನ್ನು ಪಡೆಯುವಲ್ಲಿ ಪರಮ ಯೋಗವನ್ನು ಮೆಚ್ಚಿ ಶಿವಯೋಗವನ್ನು ಮುಟ್ಟಿದನು. ಕಲ್ಯಾಣದ ಪ್ರಖ್ಯಾತ ಶರಣರೊಬ್ಬರಲ್ಲಾಗಿರುವ ಸಿದ್ಧರಾಮನನ್ನು ಕುರಿತು ಈವರೆಗೆ 33 ಶಾಸನಗಳು ಲಭ್ಯವಾಗಿದ್ದು ಅವುಗಳಲ್ಲಿ ಒಂಬತ್ತು ಶಾಸನಗಳು ವಿಜಯಪುರ ಜಿಲ್ಲೆಯಲ್ಲಿವೆ ಶ್ರೀ ಸಿದ್ದರಾಮೇಶ್ವರನ ಇಷ್ಟ ದೇವತೆ ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗಕ್ಕೆ ದೇವಗಿರಿ ಯಾದವ ವಂಶದ ಬಿಲ್ಲಮ, ಜೈತುಗಿ, ಸಿಂಹಣ, ಕನ್ನರ ಮೊದಲಾದವರು ದತ್ತಿಯನ್ನು ಬಿಡುವಾಗ ತಮ್ಮ ಮಂತ್ರಿಗಳಿಗೆ, ದಂಡ ನಾಯಕರಿಗೆ, ಸಾಮಂತರಿಗೆ, ಅಧಿಕಾರಿಗಳಿಗೆ ಸಮ್ಮತಿಯನ್ನು ಕೊಟ್ಟ ವಿಷಯವೂ ಇವುಗಳಲ್ಲಿ ಇವೆ. ಅಲ್ಲದೆ ಆರಂಭದಲ್ಲಿ ದಕ್ಷಿಣ ವಾರಣಾಸಿ, ಅಭಿನವ ಶ್ರೀಶೈಲವೆನಿಸಿದ ಶ್ರೀ ಸೊನ್ನಲಿಗೆಯ ಕ್ಷೇತ್ರ ಮಹಾತ್ಮೆ ಶ್ರೀ ಕಪಿಲಸಿದ್ಧ ಮಲ್ಲಿಕಾರ್ಜುನ ಮಹಿಮೆ ದಾನ ದತ್ತಿಗಳನ್ನು ನೀಡಿದವರ ವಂಶಾವಳಿ ದಾನದ ವಿವರಗಳನ್ನು ಒಳಗೊಂಡಿವೆ ಈ ಶಾಸನಗಳ ಕಾಲವೂ ಕ್ರಿ.ಶ. 1190 ರಿಂದ 1300 ಅಂದರೆ ಒಂದು ಶತಮಾನದ ಕಾಲಾವಧಿಯನ್ನು ವ್ಯಾಪಿಸಿ ಈ ಜಿಲ್ಲೆಯ ಇಂಡಿ ತಾಲೂಕಿನ ಚೋರ್ಗಿ, ಸಂಖ, ಕೂಡಗಿ, ಕಪ ನಿಂಬರಗಿ, ಟಾಕಳಿ ಮತ್ತು ಚಡಚಣ ಮುದ್ದೇಬಿಹಾಳ ತಾಲೂಕಿನ ಗುಂಡ ಕರ್ಜಗಿ, ಪಡೆಕನೂರ ಮತ್ತು ಜತ್ತಿ ಗ್ರಾಮಗಳಲ್ಲಿ ಇವೆ.

ಸಿದ್ಧರಾಮನು ಸೊನ್ನಲಿಗೆಯಲ್ಲ ಕಪಿಲಸಿದ್ದ ಮಲ್ಲಿಕಾರ್ಜುನ ಲಿಂಗವನ್ನು ಸ್ಥಾಪಿಸಿದ ಬಳಿಕ ಈ ದೇವರಿಗೆ ನಾಡಿನ ಬೇರೆ ಬೇರೇ ಭಾಗಗಳಿಂದ ಜನತೆ ದಾನದತ್ತಿಗಳನ್ನು ಬಿಟ್ಟ ಬಗೆಗೆ ಶಾಸನಗಳು ದೊರೆಯುತ್ತದೆ. ಸಿದ್ಧರಾಮನು ತನ್ನ ಜೀವನದ ಮೊದಲ ಘಟ್ಟದಲ್ಲಿಯೇ ಶಾಸನಗಳು ತಿಳಿಸುವಂತೆ ಜಗತ್ಪ್ರಸಿದ್ಧ ನಾಗಿದ್ದನು. ಅವನ ವಚನಾಂಕಿತವಾದ ಕಪಿಲಸಿದ್ದಮಲ್ಲಿಕಾರ್ಜುನವೆಂಬುದು ಶಾಸನಗಳಲ್ಲಿ ಒಂದಿಲ್ಲೊಂದು ಸಂದರ್ಭದಲ್ಲಿ ಒಂದಿಲ್ಲೊಂದು ರೀತಿಯಿಂದ ಆತನ ಇಷ್ಟ ದೇವತೆಯ ಹೆಸರಾಗಿ ಕಂಡು ಬರುತ್ತದೆ. ಅಲ್ಲದೆ ಶಾಸನೋಕ್ತವಾದ ಅವನ ಒಂದು ವಚನವು ಟಾಕಳಿಯ ಶಾಸನದಲ್ಲಿ ಸಂಸ್ಕೃತಕ್ಕೆ ಅನುವಾದವಾಗುವಷ್ಟರ ಮಟ್ಟಿಗೆ ಅವನ ವ್ಯಕ್ತಿತ್ವಕ್ಕೂ ವಚನಕ್ಕೂ ಮಹತ್ವ ಬಂದಿತು."

ಶಾಸನೋಕ್ತವಾದ ಈ ವಚನಗಳು ಸಿದ್ದರಾಮೇಶ್ವರನ ಇತರ ವಚನಗಳ ಜೊತೆಗೆ ಇಲ್ಲಿಯವರೆಗೆ ಯಾವುದೇ ತಾಳೆಗರಿಯ ಅಥವಾ ಕೋರಿ ಕಾಗದದ ಹಳೆಯ ಪ್ರತಿಗಳಲ್ಲಿ ದೊರೆತಿಲ್ಲ, ಇವು ಅನುಭಾವದ ವಚನವಲ್ಲವಾದುದರಿಂದ ಇದಕ್ಕೆ ಅಲ್ಲಿ ಎಡೆ ದೊರೆತಿರಲಿಕ್ಕಿಲ್ಲ. ಆದರೆ ಈ ವಚನಗಳನ್ನು ಶಾಸನಗಳಲ್ಲಿ ಉತ್ಕೀರ್ಣಿಸುವ ವ್ಯವಸ್ಥೆ ಮಾಡಿರುವರೆಂಬುದು ಸ್ಪಷ್ಟವಿದೆ.'

ಕ್ರಿ.ಶ. ೧೧೯೦ ರ ಇಂಡಿ ತಾಲೂಕಿನ ಚೋರ್ಗಿಯ ಶಾಸನವು "ಶ್ರೀ ಓಂ ಜಯ ಪರಮೇಶ್ವರ ಪರಮಾತ್ಮ ಈಶ್ವರನೋ" ಎಂದು ಪ್ರಾರಂಭವಾಗುತ್ತದೆ. ವಾರ್ದುಕೊಂಡಿ

ದೊರ್ಯ್ಯುದು ತಪ್ಪದು ದಿನ ದಿರಸ. ಎಂಬಲ್ಲಿ ಯವರೆಗಿದೆ ಕಪಿಲ ಸಿದ್ಧ ಮಲ್ಲೇಶ್ವರ ದೇವನೆ ಎಂಬ ನಾಮಾಂಕಿತವನ್ನೊಳಗೊಂಡಿದೆ. ಮುಂದುವರೆದು ದಕ್ಷಿಣದ ವಾರಣಾಸಿ ಅಭಿನವ ಶ್ರೀಶೈಲವೆನಿಪ್ಪ ಸೊನ್ನಲಿಗೆಯ ಶ್ರೀಕಪಿಲಸಿದ್ದ ಮಲ್ಲಿಕಾರ್ಜುನ ದೇವರಿಗೆ ಮಹಾಮಂಡಳೇಶ್ವರ ವೀರಣದುಗಿದ್ದೇಶ್ವರ ಮಹಾಪ್ರಧಾನ, ಮಾಯಿದೇವ ದಂಡನಾಯಕದಿಂದ ಚೋರಹಾರಿಗೆ ಗ್ರಾಮದಾನ ನೀಡಿರುವುದನ್ನು ಶಾಸನವು ಉಲ್ಲೇಖಿಸುತ್ತದೆ. ಇದೇ ತಾಲೂಕಿನ ಕೂಡಗಿ (ಕುರುಡಗಿ) ಗ್ರಾಮದಲ್ಲಿರುವ ಕ್ರಿ.ಶ. ೧೨೦೧ ರ ಶಾಸನವು ತ್ರುಟಿತವಾಗಿದ್ದು, ಯಾದವ ಜೈತುಗಿಯ ಕಾಲಕ್ಕೆ ಸೇರಿದ್ದಾಗಿದೆ. "ಸೋಮದೇವ ದಂಡನಾಯಕ, ಮಾಯಿದೇವ ನಾಯಕ ಮತ್ತು ಕರಣರಿಂದ ಕಪಿಲಸಿದ್ಧ ಮಲ್ಲಿ ನಾಥ ದೇವರಿಗೆ ಭೂದಾನ ಮಾಡಿರುವುದನ್ನು ಹೇಳಿದೆ.”

ಮುದ್ದೇಬಿಹಾಳ ತಾಲೂಕಿನ ಗುಂಡ ಕರ್ಜಗಿಯಲ್ಲಿರುವ ಯಾದವ ಸಿಂಘಣದೇವನ ಶಾಸನವು ಕಪಿಲಸಿದ್ದ ಮಲ್ಲಿ ಕಾರ್ಜುನ ದೇವರು ಎಂಬ ನಾಮಾಂಕಿತವನ್ನು ಒಳಗೊಂಡಿದೆ. ಅದೇ ತಾಲೂಕಿನ ಜತ್ತಗಿ ಗ್ರಾಮದಲ್ಲಿರುವ ಕ್ರಿ.ಶ.1267 ರ ಶಾಸನದಲ್ಲಿ ಸೊನ್ನಲಾಪುರದ ಕಪಿಲಸಿದ್ಧ ಮಲ್ಲಿನಾಥ ದೇವರಿಗೆ ದತ್ತು ಗ್ರಾಮ ಬಿಟ್ಟ ದಾನದ ಉಲ್ಲೇಖವಿದೆ. ವೀರಶೈವ ಮಹಾಪುರುಷರಲ್ಲಿ ಒಬ್ಬನಾದ ಈ ಸಿದ್ಧರಾಮನ ಉಲ್ಲೇಖವಿರುವ ಒಂಭತ್ತು ಶಾಸನಗಳು ಈ ಜಿಲ್ಲೆಯಲ್ಲಿರುವುದು ಮಹತ್ವದ ವಿಷಯವಾಗಿದೆ. ಬಸವನ ಬಾಗೇವಾಡಿ ತಾಲೂಕಿನ ಕುದರಿ ಸಾಲವಾಡಗಿ ಗ್ರಾಮದ ಎರಡನೆಯ 'ಜಗದೇಕಮಲ್ಲನ ಶಾಸನದಲ್ಲಿ ಮೂರು ಜಾವಿ ಮುನಿಯ ಉಲ್ಲೇಖವಿದೆ. ಈ ಜಿಲ್ಲೆಯ ಸಿಂಧಗಿ ತಾಲೂಕಿನ ಕಡಲೆವಾಡದ ಶಾಸನಗಳು ನಮಃ ಶಿವಾಯ ಓಂ. ನಮಃ ಶಿವಾಯ ಎಂಬ ಪಂಚಾಕ್ಷರಿ ಅಥವಾ ಷಡಕ್ಷರ ಮಂತ್ರಗಳಿಂದಲೇ ಪ್ರಾರಂಭವಾಗಿರುತ್ತವೆ. ಅದರಂತೆ ಈ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಯಾಳವಾರ, ಸಾಲವಾಡಗಿ ಗ್ರಾಮಗಳ ಶಾಸನಗಳಲ್ಲಿ ಹಾಗೂ ಸಿಂಧಗಿ ತಾಲೂಕಿನ ಕೊಂಡಗೂಳಿಯ ಶಾಸನಗಳಲ್ಲಿಯೂ ಓಂ ನಮಃ ಶಿವಾಯದಿಂದಲೇ ಪ್ರಾರಂಭವಾಗಿರುವುದನ್ನು ಕಾಣಬಹುದಾಗಿದೆ.

ಸಿಂಧಗಿ ತಾಲೂಕಿನ ದೇವೂರ ಗ್ರಾಮದ ರಾಮೇಶ್ವರ ದೇವಾಲಯದ ಮುಂದಿರುವ ಒಂದನೆಯ ಸೋಮೇಶ್ವರನ ಕ್ರಿ.ಶ.೧೦೬೪ ರ ಶಾಸನದಲ್ಲಿ "ಈ ಧರ್ಮ೦ ಅಳಿಪಿ ನೆಗಚ್ಚವರ್ಗೆ ಕುರುಕ್ಷೇತ್ರದೊಳು ಕವಿಲೆಯ ವಾರಣಾಸಿಯೊಳು ಬ್ರಾಹ್ಮಣರುಮ ಲಿಂಗಂಗಳುಮನಳಿದ ದೋಷಮಕ್ಕು" ಎಂಬ ಉಲ್ಲೇಖವಿದೆ. 'ಮುದ್ದೇಬಿಹಾಳ ತಾಲೂಕಿನ ಶಿರೂರು: ಗ್ರಾಮದ ಶಾಸನದ ಕೊನೆಯಲ್ಲಿ" ಇಧರ್ಮ್ಮವ ಪ್ರತಿ ಪಾಳಸಿದವರು ದೇವಗತಿ ಇ ಧರ್ಮಕ್ಕೆ ವಕ್ರವಾದ ನಾಯಕ ನರಕ ಬೀಚೆ ಗುರುವಿನ ಮಕ್ಕಳು ಸಹ ಶಿವಲೋಕ ಒಡೆಯರು" ಎಂಬ ಉಲ್ಲೇಖವಿದೆ, ಹಿನ್ನೆಲೆಯಲ್ಲಿ ಪ್ರಸ್ತುತ ಶಿವಶರಣರ ಕುರಿತು ಪರಿಶೀಲಿಸಲಾಗಿ ಈ ಪ್ರದೇಶದ ಮಠಗಳಿಗೆ ಮೂಲ ಅರ್ಜುನವಾಡ (ಹುಕ್ಕೇರಿ ತಾ.) ಶಾಸನದಲ್ಲಿ ಕಂಡುಬರುವರು. ಈ ಶಾಸನದಲ್ಲಿ ಸ್ಪಷ್ಟವಾದ ಕಾಲಮಾನದ ಉಲ್ಲೇಖವಿದ್ದು ದೇವಗಿರಿಯ ಯಾದವ ದೊರೆ ಕನ್ನರದೇವನ ಆಳ್ವಿಕೆಯು ಕ್ರಿ. ಶ. 1260ನೇ ವರ್ಷವನ್ನು ಉಲ್ಲೇಖಿಸಿದೆ. ಈ ಶಾಸನದಲ್ಲಿ ದೇವಗಿರಿ ಯಾದವರ ಅಧಿಕಾರಿಗಳಾದ ಚಾವುಂಡ ಮತ್ತು ನಾಗರಾಜರು ಸೇರಿ ಬಸವಣ್ಣನವರ ವಂಶಸ್ಥರಾದ ಹಾಲಬಸವಿದೇವ ಮುನೀಶನಿಗೆ ಅರ್ಜುನವಾಡ ಸಮೀಪದ ಕವಿಳಾಸಪುರದಲ್ಲಿ ಅವನಿಗೆ ಮೊದಲಿದ್ದ ದತ್ತಿಗಳನ್ನು ನವೀಕರಿಸಿಕೊಟ್ಟಿದ್ದಾರೆ. ಕವಿಳಾಸಪುರ ಈಗ ಹಾಳಾಗಿದ್ದು ಈಗಿನ ಅರ್ಜುನವಾಡ ಗ್ರಾಮದ ಸೀಮೆಯಲ್ಲಿದೆ. ಅಲ್ಲಿರುವ ಮಲ್ಲಿಕಾರ್ಜುನ, ಸಂಗಮೇಶ್ವರ ಮತ್ತು ನಾಗೇಶ್ವರ ಈ ಮೂರು ದೇವಸ್ಥಾನಗಳಿಗೆ ಅವುಗಳ ಅಧಿಕಾರಿ ಹಾಲಬಸವಿದೇವಗೆ

ಕೊತ್ತಸಿ, ಕುರವನಿಗೆ ಮತ್ತು ಅಂಕವಲ ಎಂಬ ಮೂರು ಊರುಗಳನ್ನು ಮತ್ತು ಕೆಲವು ತರ ಪರಿಹಾರಗಳನ್ನು ಲಕ್ಷೇಶ್ವರದ ಸೋಮನಾಥದೇವರ ಸನ್ನಿಧಿಯಲ್ಲಿದ್ದುಕೊಂಡು ದತ್ತಿ ಬಿಟ್ಟರೆಂದು ತಿಳಿಸುವದು ಇದರಿಂದ ಹಾಲಬಸವಿ ದೇವಮುನಿ ಮತ್ತು ಆತನ ಮನೆತನದವರು 1250ಕ್ಕಿಂತ ಪೂರ್ವದಲ್ಲಿಯೇ ಇಲ್ಲಿ ನೆಲೆಸಿ ವೀರಶೈವ ಧರ್ಮದ ಪ್ರಚಾರದಲ್ಲಿ ನಿರತರಾಗಿದ್ದರೆಂದು ತಿಳಿದು ಬರುವದು. ಈ ಶಾಸನ ಕಾಲಾವಧಿಯ ನಂತರ ಸುಮಾರು 180 ವರ್ಷಗಳ ಅಂತರದಲ್ಲಿದ್ದ ಹಂಪೆಯ ಲಕ್ಕಣ್ಣ ದಂಡೇಶನು ತನ್ನ ಶಿವ ತತ್ವ ಚಿಂತಾಮಣಿಯಲ್ಲಿ ಕಲ್ಯಾಣದಲ್ಲಿ ಬಸವರಾಜನ ಮಠವಿತ್ತು ಎಂದು ಅದರಲ್ಲಿದ್ದ ವರದಾನಯ್ಯ ಎಂಬ ಶರಣನಿದ್ದನೆಂದು ತಿಳಿದು ಬರುತ್ತದೆ. ಬಸವಣ್ಣನವರ ನಂತಹ ಶರಣರು ಕಲ್ಯಾಣ ತ್ಯಜಿಸಿ ಹೋಗಬೇಕಾಗಿ ಬಂದರೂ ಅವರ ವಂಶಸ್ಥರಾದ ಕೆಲವರು ಕ್ರಾಂತಿಯ ಜರ್ಜರಿತದಿಂದ ಪಾರಾಗಿ ಉತ್ತರ ಕರ್ನಾಟಕದ ಹಲವು ಊರುಗಳಲ್ಲಿ ದೃಢವಾಗಿ ನಿಂತಿದ್ದರೆಂದು ಸ್ಪಷ್ಟವಾಗುತ್ತದೆ.

ರಾಘವಾಂಕ ಚರಿತ್ರೆ ಬರೆದ ಸಿದ್ದನಂಜೇಶನು ಕರ್ನೂಲ ಜಿಲ್ಲೆಯ ನಂದ್ಯಾಲ ಮಠಕ್ಕೆ ಹೋಗುವಾಗ ಹೂಲಿಯ ಪಂಚವಣ್ಣಗೆಯ ಮಠದ ಗುರುಸಿದ್ದನಂಜೇಶನ ಶಿಷ್ಯನಾಗಿ ಅಧ್ಯಯನ ನಿರತನಾಗಿದ್ದ ಈತ ತನ್ನ ಗುರುರಾಜ ಚಾರಿತ್ರ್ಯದಲ್ಲಿ ಗುರು ಸಿದ್ಧನಂಜೇಶ ಮತ್ತು ಅವನ ಪತ್ನಿ ಚನ್ನವೀರಾಂಜೆಯರನ್ನು ಜೊತೆಗೆ ಹೂಲಿಯ ಪರಿಸರವನ್ನೇ ಸುಂದರವಾಗಿ ವರ್ಣಿಸಿದ್ದಾನೆ. ಇದರಿಂದ ಅಂದು (17ನೇ ಶ.) ಹೂಲಿಯ ವೀರಶೈವ ಮಠ ಬಹುಪ್ರಸಿದ್ಧವಾಗಿದ್ದು ಈ ಸಿದ್ಧನಂಜೇಶನ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ನಿರತರಾಗಿದ್ದರೆಂದು ಹೇಳಿದ್ದಾನೆ. ಕವಿನಂದೀಶ ರಾಚಿವಟ್ಟಿಯಾರಾಷ್ಟ್ರ ಭದ್ರೇಶ, ನಂಜಯ್ಯ, ವಿಜಯಪುರದ ನಂಜಯ್ಯ, ಮುಖಬೋಳು ಸಿದ್ದರಾಮಯ್ಯ ಭೂಷದೋಣೆಯ ಮಠದ ಮುತ್ತಿನಕಥೆಯಯ್ಯ, ವಳಗೆಯ ಸಿದ್ದರಾಮಯ್ಯ ಮುಂತಾದ 22 ಜನ ಶಿಷ್ಯರ ಹೆಸರುಗಳು ತಿಳಿದು ಬರುತ್ತವೆ. ಮುಂದೆ ರಾಯಭಾಗ ಶೇಡುಬಾಳ (ಅಥಣಿ ತಾ.) ನಂಜಯ್ಯಗಳು ಕಲುಬಾವಿ ಬೈಲಹೊಂಗಲ ತಾ. ಕುಂಬಾರಕಾಯಕದ ಶರಣ ಶೀಲವಂತ ಬಸಪ್ಪಯ್ಯನೆಂಬ ಪ್ರಖ್ಯಾತ ಭಕ್ತನಾಗಿದ್ದನೆಂಬ ಅಂಶ ಇಲ್ಲಿಯ ಶಾಸನಗಳು ಪ್ರಾಚೀನ ಕಾಲದ ದೇವಾಲಯದ ಅವಶೇಷಗಳು 16–17ನೇ ಶತಮಾನಕ್ಕಾಗಲೇ ವೀರಶೈವ ಮಠಗಳ ಪರಂಪರೆ ಇಲ್ಲಿತ್ತೆಂಬ ಅಂಶಗಳ ಮೇಲೆ ಬೆಳಕು ಚೆಲ್ಲುತ್ತವೆ.

ಬೆಳಗಾವಿ ಜಿಲ್ಲೆಯ ಗೊಡಚಿಯಲ್ಲಿ ಯಮಕನಮರಡಿ, ಘೋಡಗೇರಿ, ಬೆಲ್ಲದಬಾಗೇವಾಡಿ (ನಾಲ್ಕು ಹುಕ್ಕೇರಿ ತಾಲೂಕಿನಲ್ಲಿವೆ) ಗೋಕಾವಿ, ಮಮದಾಪೂರ (ಗೋ. ತಾ.) ಚಿಕ್ಕೋಡಿ, ಖಡಕಲಾಟ, ನೀರಲಗಿ, ನವಿನಿಹಾಳ (ಚಿಕ್ಕೋಡಿ ತಾ.) ಗೋಡ್ ಇಂಗ್ಲಿಷ್ ಮುಂತಾದ ಊರುಗಳಲ್ಲಿ ಸಂಪಾದನೆಯ ಸಮಯದ ಮಠಗಳಿರುವುದು ಬೆಳಗಾವಿ ಜಿಲ್ಲಾ ಪ್ರದೇಶದಲ್ಲಿ ಕಂಡು ಬರುವವು ಆದರೆ ಇಲ್ಲಿಯ ಸಂಪ್ರದಾಯ ಎಷ್ಟು ಹಳೆಯದು ಎಂಬ ಅಂಶ ಸ್ಪಷ್ಟ ಪಡಿಸುವುದು ಕಷ್ಟ ಸಾಧ್ಯದ ಮಾತಾಗಿದೆ. 1550 ರಿಂದ 1600ರ ಅವಧಿಯಲ್ಲಿಯೇ ಸಾಮಾನ್ಯವಾಗಿ ಈ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವೀರಶೈವ ಸಂಪ್ರದಾಯಗಳ ಮಠಗಳ ಬೆಳವಣಿಗೆ ಕಂಡುಬರುವುದು.

ಕ್ರಿ. ಶ. 1601 ರಲ್ಲಿ ಗೋಕಾಕದಲ್ಲಿ ಒಂದು ವೀರಶೈವ ಮಠ ಸ್ಥಾಪನೆಯಾಗಿದ್ದು ಅದರ ಮೂಲ ಸ್ಥಾಪಕರು ಶ್ರೀಗುರುಸಿದ್ಧಚರಮೂರ್ತಿಗಳೆಂಬವರಾಗಿದ್ದಾರೆ. ಇವರಾದ ಬಳಿಕ ಎರಡನೇ ಗುರುಸಿದ್ದ ದೇವರು, 3ನೇ ರಾಜಕೋಟಿ ಸ್ವಾಮಿಗಳು ಪಟ್ಟಾಧಿಕಾರಿಗಳಾದರು. ಈ ಸ್ವಾಮಿಗಳ ಕಾಲದಲ್ಲಿ ಇದೇ ಪ್ರದೇಶದಲ್ಲಿಯ ಯಮಕನಮರಡಿ, ಘೋಡಗೇರಿ ಮತ್ತು ಗೋಕಾವಿ ಮಠಗಳನ್ನು ಸ್ಥಾಪಿಸಿ ಅಲ್ಲಿ ಮರಿ ದೇವರಗಳನ್ನು ಪಟ್ಟಗಟ್ಟುವ ಮೂಲಕ ವೀರಶೈವ

ಧರ್ಮದ ಬೆಳವಣಿಗೆಗೆ ಕಾರಣರಾದರು.

ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ನಾನಾ ಕಡೆಗಳಲ್ಲಿ ಸಂಚರಿಸಿದ ಶ್ರೀ ಕಾಡಸಿದ್ದೇಶ್ವರರು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾ. ಯಡೂರು ತಾ ಗೋಕಾಕ್ ಗುಂಡೇವಾಡಿ ಚಂದುರು ರಬಕವಿ ಕುಂಡಲ ಬಸ್ತಿವಾಡ ನಿಜ ಮೂವರು ಕರ್ಜಿಗೆ ನವಲಗುಂದ ಹುಲಿ ಕಟ್ಟಿ, ನಗರ ಸಿದ್ದಗಿರಿ ಹುಬ್ಬಳ್ಳಿ ಗೋಕಾಕ, ಮುಂತಾದ ಕಡೆಗಳಲ್ಲಿ ಮಠಗಳನ್ನು ಬೆಳೆಸಿದರು. ಈ ಮಠಗಳ ಸ್ಥಾಪನೆಯ ಕುರಿತು ಬೆಳಗಾವಿ ನೆರೆಯ ಪ್ರದೇಶ ಮಠದಲ್ಲಿ ಸನದುಗಳಿದ್ದು ಅವುಗಳಲ್ಲಿ 1107ನೆಯ ವರ್ಷದ್ದು ಅತ್ಯಂತ ಪ್ರಾಚೀನವಾಗಿದೆ. ಮೊಗಲರ ದೊರೆ ಕೂಡಾ ಈ ಕೋಣೇರಿ ಮಠಕ್ಕೆ ಸನದು ಹಾಕಿಕೊಟ್ಟಿರುವರನ್ನು ಡಾ.ಎಂ. ನೇಗಿನಾಳರವರು ತಮ್ಮ ಪ್ರಬಂಧದಲ್ಲಿ ಗುರ್ತಿಸಿದ್ದಾರೆ. ಕೊಲ್ಲಾಪೂರದ ಛತ್ರಪತಿಗಳು ಮತ್ತು ಬಾದಶಾಹರು ಸಹ ಮಠಕ್ಕೆ ಬೇರೆ ಬೇರೆ ಕಾಲಗಳಲ್ಲಿ 120 ಸನದುಗಳನ್ನು ಕೊಟ್ಟಿರುವ ಬಗ್ಗೆ ತಿಳಿದುಬರುವುದು. ಚಿಕ್ಕೋಡಿ ತಾಲೂಕಿನ 'ಯಡೂರು' ಮಠ ಬಸವಣ್ಣನವರ ಸಮಕಾಲೀನವೆಂದು ಕೆಲವು ಪುರಾತತ್ವ ಆಧಾರಗಳಿಂದ ಶ್ರೀ ಶಿವಪ್ಪ ಛಪ್ರ ಎಂಬ ವಿದ್ವಾಂಸರು ಬರೆದ 'ಶ್ರೀ ಕ್ಷೇತ್ರ ಯಡೂರು' ಎಂಬ ಕೃತಿಯಲ್ಲಿ ಉಲ್ಲೇಖವಾಗಿದೆ. ಕೊಕಟನೂರು ಶಿರಸಿಂಗಿ (ಅಥಣಿ ತಾ.) ಗಳಲ್ಲಿ ಸಹ ವೀರಶೈವ ಮಠಗಳಿದ್ದು ಕ್ರಿ. ಶ. 1302ರಲ್ಲಿ ಆನೆಗೊಂದಿಯ ಶಿರಸಪಯ್ಯನ ಮಠದ ದೊರೆ ರಾಮರಾಯವೆಂದಿವನಿಂದ ಕೊಕಟನೂರಿನ ಗೌಡಿಕೆಯನ್ನು ಪಡೆದನೆಂದು ಅದರ ಪ್ರಾಚೀನತೆಯನ್ನು ಗುರ್ತಿಸಿರುವುದನ್ನು ಕಾಣುತ್ತೇವೆ.

ಗೋಕಾಕ ತಾಲೂಕಿನ ಕೊಣ್ಣೂರು ಮಠ ಕಾಡಸಿದ್ದೇಶ್ವರ ಮಠದೊಂದಿಗಿನ ಸಂಬಂಧ ಮತ್ತು ಗುರುಪರಂಪರೆ ಅನಾದಿ ಕಾಲದಿಂದ ಬೆಳೆದು ಬಂದಿದ್ದು ಈ ಕೊಣ್ಣೂರು ಮಠದಲ್ಲಿನ ಕಾಡಸಿದೇಶ್ವರ ವಚನಗಳಲ್ಲಿ ವೀರಶೈವ ಷಟ್ ಸ್ಥಳದೊಳಗೆ ಕುಲಕ್ಕೊಬ್ಬ ಗಣಂಗಳು ಕಾಯಕವ ಮಾಡಿ ಆಚರಿಸಿ ನಿರ್ವಹಣೆ ವಚನವು ಎಂಬ ವಾಕ್ಯವಿದೆ ಪ್ರಥಮದಲ್ಲಿ ಗುರು ಸ್ತೋತ್ರ ಎಂದು ಹೇಳಿ ವಚನ ಪ್ರಾರಂಭವಾಗುವುದು ಬೆಳಗಾವಿ ನೆರೆಯ ರಾಜ್ಯದ ಕಾಡಸಿದ್ದೇಶ್ವರ ಮಠದ ಸಂಪ್ರದಾಯ ಸಂಬಂಧಗಳು ಬೆಳಗಾವಿ ಜಿಲ್ಲೆಯ ಅನೇಕ ಮಠಗಳಲ್ಲಿ ಕಂಡು ಬರುತ್ತಿದ್ದು ವಚನಗಳು ಮತ್ತು ಶಾಸನಗಳನ್ನು ಅಧ್ಯಯನ ಮಾಡಿ ನೋಡಲಾಗಿ ಅಲ್ಲಿಯ ಕಾಡ ಸಿದ್ದೇಶ್ವರ ಮಠದ ಹುಟ್ಟು ಮತ್ತು ಸ್ಥಾಪನೆ 14ನೇ ಶತಮಾನದ ಆಚೆ ಈಚೆ ಎಂಬುದು ಸ್ಪಷ್ಟವಾಗುತ್ತದೆ. ಕೊಲ್ಲಾಪುರದ ಛತ್ರಪತಿಗಳು, ಸಾಂಗಲಿ ಪಟವರ್ಧನರು, ಔರಂಗಜೇಬ, ಕೊಕಟನೂರು, ಶಿರಸಂಗಿ, ಮತ್ತು ನವಲಗುಂದ ದೇಸಾಯಿಯವರು ಮೊದಲಾದ ರಾಜ ಮಹಾರಾಜರು ಸಹ ಈ ಮಠಗಳಿಗೆ ಗೌರವ ಸಲ್ಲಿಸುತ್ತಾ ಬಂದಿದ್ದಾರೆ. ಈ ಜಿಲ್ಲೆಯ ಮತ್ತೊಂದು ಪ್ರಸಿದ್ಧ ಮಠವೆಂದರೆ ಅರಭಾವಿಯ ದುರದುಂಡೀಶ್ವರ ಮಠ, ಈ ಮಠದ ಪರಂಪರೆ ತುಂಬಾ ಮಹತ್ವದ್ದಾಗಿದ್ದು, ಗೋಕಾಕ ತಾಲೂಕಿನಲ್ಲಿ ಅಷ್ಟೇ ಅಲ್ಲದೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ, ಬೈಲಹೊಂಗಲ, ಬೆಳಗಾವಿ, ರಾಮದುರ್ಗ ತಾಲೂಕಗಳಲ್ಲಿ ಕೆಲಮಟ್ಟಿಗೆ ಜಿಲ್ಲೆಯ ಹೊರಗಡೆ ಕೂಡ ಇದರ ಪ್ರಭಾವ ಕಂಡುಬರುವುದು, ನಿಡಸೋಸಿ, ಸಂಕೇಶ್ವರ, ಬೋರಗಲ್, ಕಮಟನೂರ ಕೋಚರಿ (ಹುಕ್ಕೇರಿ ತಾ.) ಬೆಳವಡಿ ತಿಗಡೊಳ್ಳಿ, ಸಂಪಗಾವ, ಕಲ್ಲೂರ (ಬೈಲಹೊಂಗಲ ತಾ.) ಮುರಗೋಡ, ಯರಗಟ್ಟಿ, ಗೋರಬಾಳ, ಸವದತ್ತಿ ತಾ ಕಡಕೋಳ, ರಾಮದುರ್ಗ ತಾ. ಬೆಳಗಾವಿ ತಾಲೂಕಿನಲ್ಲಿ ಕಡೋಲಿ, ತಾರೀಹಾಳ, ಚಿಕ್ಕೋಡಿ ಮುಂತಾದ ಊರುಗಳಲ್ಲಿ ಶ್ರೀ ದುರದುಂಡೇಶ್ವರ ಮಠಗಳು ಮತ್ತು ಗುಡಿಗಳು ನೆಲೆ ನಿಂತಿರುವುದು ಕಂಡುಬರುವುದು, ಅರಭಾವಿ ಸಮೀಪದ ದುರದುಂಡೇಶ್ವರ ಈ ಮಠದ ಮೂಲ ಗುರುಗಳು ಶ್ರೀಮನ್ ನಿರಂಜನ ಜಗದ್ಗುರು ಶಿವಲಿಂಗೇಶ್ವರರು ನೆಲೆ ನಿಂತು ಮೊದಲು ಕಾಡು ಪ್ರದೇಶವಾಗಿದ್ದ

ಈ ಭಾಗದ ನೆಲದಲ್ಲಿ ವೀರಶೈವ ಮಠದ ಬೆಳವಣಿಗೆ ಮಾಡಿ ಪುಣ್ಯದ ಬೀಡನ್ನಾಗಿಸಿದರು. ಈ ದುರುದುಂಡೇಶ್ವರ ಮಠದಿಂದ ನಡೆದುಬಂದ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಗಳಿಗೆ ಲೆಕ್ಕವಿಲ್ಲ ಪುಣ್ಯಾರಣ್ಯವೆಂಬ ಮಾಸಿಕ ಮಠದಿಂದ ಪ್ರಕಟವಾಗುತ್ತವೆ. ಮುರಗೋಡ ಶಾಖೆಯಿಂದ ಜ್ಯೋತಿ ಬೆಳಗುತ್ತದೆ ಎಂದು ವರ್ಣಿತವಾಗಿದೆ.

ಬೆಳಗಾವಿ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಬಹು ಪ್ರಸಿದ್ಧವಾದ ಕಿತ್ತೂರ ಸಂಸ್ಥಾನದ ಪೂರ್ವಕಾಲದ್ದೆನ್ನಲಾದ ಕಿತ್ತೂರಿನ ಕಲ್ಮಠದ ಅಧೀನದಲ್ಲಿ ಈ ಪ್ರದೇಶದ ಕುಲವಳ್ಳಿ, ಅರವಳ್ಳಿ, ತುರ್ಕಾರ ಶೀಗೆಹಳ್ಳಿ, ಸಂಪಗಾಂವಿ, ತಿಗಡಿ, ನೇಸರಗಿ, ಬೈಲಹೊಂಗಲ, ಬೆಳವಡಿ, ಬೀಡಿ, ಹಲಸಗಿ, ಮುಗಳಿಹಾಳ, ನಂದಗಡ, ಇಟಗಿ, ಖಾನಾಪೂರ, ಬೈಲೂರ, ದೇಶನೂರ ಮುಂತಾದೆಡೆ ಸುಮಾರು 36 ಶಾಖಾ ಮಠಗಳಿವೆ. ಕಿತ್ತೂರಿನ ಕಲ್ಮಠಕ್ಕೆ ಸುಮಾರು 1100 ಎಕರೆ ಭೂಮಿ ಇದ್ದ ಕುರಿತು ಮಾಹಿತಿ ದೊರಕುತ್ತಿದ್ದು ಆದರೆ ಇದರ ಬಹುತೇಕ ಭಾಗ ರೈತರ ಕೈವಶವಾಗಿದೆ ಎಂದು ತಿಳಿದುಬರುವುದು. ಈ ಮಠದಿಂದ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಕೆಲಸವಾಗಿದ್ದು ಇಲ್ಲಿ ಉಚಿತ ಪ್ರಸಾದ ನಿಲಯ, ಶಿಕ್ಷಣ ಸಂಸ್ಥೆಯಿದ್ದು ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಮಾಡಿದ ಕೆಲಸ ಅಪಾರವೆಂದು ಹೇಳಬಹುದು ಗರಗದ ಮಡಿವಾಳೇಶ್ವರ ಮಠ ಕೂಡ ಈ ಕಲ್ಮಠದ ಪರಂಪರೆಗೆ ಸೇರಿದೆ ಈ ಕಲ್ಮಠದ ಪರಂಪರೆಗೆ ಅನೇಕ ಶಿಷ್ಯರು ವೀರಶೈವ ಧರ್ಮಕ್ಕೆ ಕೊಟ್ಟ ಕೊಡುಗೆ ಅಪಾರವಾಗಿದೆ ಈ ಭಾಗದ ದೇಗಲೊಳ್ಳಿ ಅಂಬಡಗಟ್ಟಿ ನೇಗಿನಾಳ ತುರಮುರಿ ಒಕ್ಕುಂದ ಹಿರೇನಂದಿಹಳ್ಳಿ ದೇವರಶೀಗೆಹಳ್ಳಿ ಬಾವಿಹಾಳ ಎರಡಾಲ ಗೌರವಿಕೊಪ್ಪ ಹೊಸೂರು ಬಡಸ ಗರಗ ಮಕರಾಯನಪುರ ಮುಂತಾದ ಮಠಗಳು ಈಗಲೂ ಜಾಗೃತ ಸ್ಥಾನಗಳೆಂದು ಗೌರವಿಸಲ್ಪಟ್ಟಿವೆ. ಹಾಗೆಯೇ ಸಾವಳಗಿಯ ಶ್ರೀ ಶಿವಲಿಂಗೇಶ್ವರ ಮಠ, (ಸ. 17ನೇ ಶ.) ಅಥಣಿಯ ಶ್ರೀ ಗಚ್ಚಿನ ಮಠ (15ನೇ ಶತಮಾನ) ಮೋಟಗಿ ಮಠ (ಅಥಣಿ 1650) ಮುರುಗೇಂದ್ರಶ್ರೀ ಶಿವಯೋಗಿಗಳ ವಿರಕ್ತ ಮಠ ಸೇಗುಣಿಸಿ ಶ್ರೀ ಗುರುಲಿಂಗೇಶ್ವರ ವಿರಕ್ತಮಠ ಕಡೋಲಿ ಸು. 1775 ರಲ್ಲಿ ಅವರಾದಿಯ ಶ್ರೀ ಫಲಹಾರೇಶ್ವರ ಮಠ ಕ್ರಿ.ಶ. 1770 ಅಂಕಲಗಿಯ ಶ್ರೀಅಡವಿ ಸ್ವಾಮಿ ಮಠ, ಬೆಂಡವಾಡರ ಶ್ರೀ ರೇವಣಸಿದ್ದೇಶ್ವರ ಮಠ ಮುಂತಾದ ವಿರಕ್ತ ಮಠಗಳ ಸಂಪ್ರದಾಯದ ಮಠಗಳು ಈ ಜಿಲ್ಲೆಯ ತುಂಬ ಹರಡಿವೆ. ಇವೆಲ್ಲವುಗಳ ಚಾರಿತ್ರಿಕ ವಿವರಗಳನ್ನು ಸಂಗ್ರಹಿಸಿ ಅಧ್ಯಯನಿಸುವುದರ ಅವಶ್ಯಕತೆ ನಮಗೆ ಎದ್ದು ಕಾಣುವುದು.

ಬೆಳಗಾವಿ ಜಿಲ್ಲೆಯ ವಣ್ಣೂರಿನ ಪ್ರಭುದೇವರ ಗುಡಿಯ ಹೊರಭಾಗದಲ್ಲಿ ದೊರೆತ ಕ್ರಿ. ಶ. 15ನೇ ಶತಮಾನದ ಶಾಸನ ವಣ್ಣೂರಿನ ಮಹಾಪ್ರಭು ಕಲ್ಲಗಾವುಂಡನು ಅಲ್ಲಿಯ ಕಲಿದೇವರ ಚೈತ್ರಪೂಜೆ, ಶಿವಾರ್ಚನೆ, ರಂಗಪೂಜೆ ಮತ್ತು ಜಂಗಮ ಆರಾಧನೆಗಾಗಿ 200 ಕಮ್ಮ ಭೂಮಿಯನ್ನು ದಾನ ಬಿಟ್ಟಿರುವುದಾಗಿ ತಿಳಿಸುತ್ತದೆ. ಜಿಲ್ಲೆಯ ಹನ್ನಿಕೇರಿ ಶಿವಾಲಯದ ಮತ್ತೊಂದು ಶಿಲಾ ಶಾಸನದಲ್ಲಿ ಕ್ರಿ. ಶ. 1257ರ ಕಾಲಮಾನದ ಉಲ್ಲೇಖವಿದ್ದು ಕಲ್ಲರಸ ಎಂಬುವನ ಆಜ್ಞೆಯ ಮೇರೆಗೆ ಮಹಾಪ್ರಧಾನ ಸರ್ವಾಧಿಕಾರಿ ಚೌಡ ಶೆಟ್ಟಿಯ ಸಮಕ್ರಮದಲ್ಲಿ ಸುಂಕಾಧಿಕಾರಿ ಕೇತಗಾವುಂಡನು ಬೆಂಚುಣಿಕೆ ಗ್ರಾಮದಲ್ಲಿ ಪಂಚಮಠ ಸ್ನಾನಗಳಿಗೆ ತಿಪ್ಪಸುಂಕ ಎಂಬ ತೆರಿಗೆ ಸಂಗ್ರಹದಿಂದ ಬಂದ ಸಂಪತ್ತನ್ನು ಸಲ್ಲಿಸಿದನೆಂದು ತಿಳಿಸುತ್ತದೆ. ಅದೇ ರೀತಿ ನೇಸರಗಿಯ ಜೋಡುಗುಡಿಯ ರಟ್ಟರ ರಾಜಧಾನಿ ವೇಣುಗ್ರಾಮ (ಬೆಳಗಾವಿ) ಆಳ್ವಿಕೆಯ ಮಾಡುವಾಗ ಆತನ ಪತ್ನಿ ಮತ್ತು ಮಕ್ಕಳು ಅಲ್ಲಿಯ ಮಾಣಿಕೇಶ್ವರ ದೇವಾಲಯಕ್ಕೆ ದಾನದತ್ತಿಗಳನ್ನು ಬಿಟ್ಟಿರುವ ವಿಷಯವನ್ನು ವರ್ಣಿಸುತ್ತ ಗುರು, ಶಿಕ್ಷಾ ಗುರು ಮತ್ತು ಆಚಾರ್ಯ ಮಲ್ಲಿಕಾರ್ಜುನ, ಕೇಶಿರಾಜ, ಶಿವಾಲಯ, ಗುರುಗಳು, ವೀರಭದ್ರ, ಮಲ್ಲಿಕಾರ್ಜುನ ದೇವರು,

ಶ್ರೀಶೈಲದ ಉಲ್ಲೇಖಗಳನ್ನು ಕೊಡುತ್ತಾ ಕಾಳಾಮುಖರ ಕುರಿತು ಮಾಹಿತಿ ನೀಡುವುದು.

ಉಪಸಂಹಾರ:

ವಿಜಯಪುರ ಮತ್ತು ಬೆಳಗಾವಿ ಜಿಲ್ಲೆಗಳ ಶಾಸನಗಳನ್ನು ಅಧ್ಯಯನ ಮಾಡಿದಾಗ, ಶಿವಶರಣರು ಕೇವಲ ಧಾರ್ಮಿಕ ಚಳವಳಿಯನ್ನು ನಡಸಿದವರಲ್ಲ; ಅವರು ಸಾಮಾಜಿಕ ಕ್ರಾಂತಿಯ ಶಿಲ್ಪಿಗಳೆಂಬುದು ಸ್ಪಷ್ಟವಾಗುತ್ತದೆ. ಶಾಸನಗಳಲ್ಲಿನ ಮಾಹಿತಿಗಳು ಶರಣರ ವ್ಯಾಪ್ತಿ ಗ್ರಾಮೀಣ–ನಗರ ಸಮಾಜದ ಎಲ್ಲಾ ಹಂತಗಳಿಗೂ ಹಬ್ಬಿದ್ದುದನ್ನು ಸೂಚಿಸುತ್ತವೆ. ವರ್ಣಭೇದ, ಅಸಮಾನತೆ, ಅನ್ಯಾಯಗಳ ವಿರುದ್ಧ ನಿಂತು ಸಮಾನತೆಗೆ ಮನ್ನಣೆ ನೀಡಿದ ಚಟುವಟಿಕೆಗೆ ಶಾಸನಗಳು ದೃಢಸಾಕ್ಷಿಗಳಾಗಿವೆ. ವಿಶೇಷವಾಗಿ ಮಠಗಳು, ಅನ್ನದಾಸೋಹ, ಶರಣರ ಸೇವಾಕ್ಷೇತ್ರ, ದಾನಧರ್ಮಗಳು ಹಾಗೂ ಶರಣಸಮುದಾಯಕ್ಕೆ ನೀಡಲಾದ ರಾಜಾನುಗ್ರಹವು ಈ ಚಳವಳಿಯ ನೆಲೆಯನ್ನು ಮತ್ತಷ್ಟು ಬಲಪಡಿಸಿತು. ವಿಜಯಪುರ ಜಿಲ್ಲೆಯ ಶಾಸನಗಳು ಶರಣಚಳವಳಿಗೆ ಆಡಳಿತಾತ್ಮಕ ಮತ್ತು ಸಾಂಸ್ಥಿಕ ಬೆಂಬಲ ದೊರೆತಿರುವುದನ್ನು ತೋರಿಸಿವೆ; ಬೆಳಗಾವಿ ಜಿಲ್ಲೆಯ ಶಾಸನಗಳು ಶರಣರ ಸಾಮಾಜಿಕ ಏಕೀಕರಣ ಮತ್ತು ಸಾಮಾನ್ಯ ಜನರ ಜೀವನದಲ್ಲಿ ಅವರ ಪ್ರಭಾವ ಹೆಚ್ಚಿದುದನ್ನು ಸಾಬೀತುಪಡಿಸುತ್ತವೆ. ಇವೆರಡರ ಅಧ್ಯಯನದಿಂದ ಶರಣ ಚಿಂತನೆ ನೈಜ ಜೀವನಕ್ಕೆ ಮಿಳಿತಗೊಂಡ ರೀತಿಯ ಸ್ಪಷ್ಟ ಚಿತ್ರಣ ದೊರಕುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಭಾರತದ ಗೆಜೆಟಿಯರ್ ವಿಜಯಪುರ ಜಿಲ್ಲೆ.,
2. ಕಲಬುರ್ಗಿ ಎಂ .ಎಂ., ಶಾಸನಗಳಲ್ಲಿ ಶಿವಶರಣರು
3. ಸೌತ್ ಇಂಡಿಯನ್ ಹಿಸ್ಟರಿ ಇನ್ಸ್ಕ್ರಿಪ್ಷನ್., vol XV, XX
4. ಪಡಶೆಟ್ಟಿ ಎಂ. ಎಂ., ಕೊಂಡಗೂಳಿ ಕೇಶಿರಾಜ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
5. ಕಲಬುರ್ಗಿ ಎಂ.ಎಂ., ಬಸವಣ್ಣನವರನ್ನು ಕುರಿತ ಶಾಸನಗಳು ,ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
6. ಹಿರೇಮಠ ಆರ್.ಸಿ., ಶ್ರೀ ಸಿದ್ದರಾಮೇಶ್ವರ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
7. ಬೆಳಗಾವಿ ಜಿಲ್ಲೆಯ ಗೆಜೆಟಿಯರ್., ಕರ್ನಾಟಕ ಸರ್ಕಾರ ಬೆಂಗಳೂರು
8. ಎಂ.ಬಿ. ನಗಿನಾಳರವರ., ಪ್ರಬಂಧಗಳು ಕ.ವಿ.ವಿ.ಹಂಪಿ
9. ಎಸ್ ಆರ್ ಗುಂಜಾಳ್., (ಸಂ)ಬೆಳಗಾವಿ ಬೆಳಕು
10. ರಂಗಸ್ವಾಮಿ., ಬೆಳಗಾವಿ ಜಿಲ್ಲೆಯ ಶಾಸನಗಳು ಸಾಂಸ್ಕೃತಿಕ ಅಧ್ಯಯನ ಮೈಸೂರು ವಿ.ವಿ.ಪಿ.ಎಚ್.ಡಿ ಪದವಿಯ ಮಹಾ ಪ್ರಬಂಧ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.